**ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1947/2021 C/w 430/2023**

ಚಾಸಾ14

ಪ್ರಾಸಾ 2

ಸಾಕ್ಷಿಯ ಹೆಸರು : ನವನೀತ್
ತಂದೆ / ಗಂಡನ ಹೆಸರು : ಪಿ ಟಿ ಪೂವಯ್ಯ
ವಯಸ್ಸು : 34
ಉದ್ಯೋಗ : ಖಾಸಗಿ
ವಾಸ ಸ್ಥಳ : ಮರಡಿ ಊರು

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 03.07.2026**
**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ಚಾಸಾ 1 ಮತ್ತು 13 ರವರು ನನಗೆ ಗೊತ್ತು . ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ ಗೊತ್ತು. ದಿಃ 11.06.2021 ರಂದು ನಾನು ಮತ್ತು ಚಾಸಾ 13 ರವರು ಇಂಡಸ್ಟ್ರಿಯಲ್ ಏರಿಯಾದಲ್ಲಿದ್ದು ಚಾಸಾ 21 ರವರು ದೂರವಾಣಿ ಕರೆ ಮಾಡಿ ಠಾಣೆಗೆ ಬರುವಂತೆ ತಿಳಿಸಿದ್ದು ಅದರಂತೆ ನಾವು ಠಾಣೆಗೆ ಹೋಗಿದ್ದು, ಚಾಸಾ 21 ರವರು ದಿಃ 10.05.2021 ರಂದು ಚಾಸಾ 1 ರವರ ಕೊಟ್ಟಿಗೆಯಲ್ಲಿ ಎರಡು ಕರು ಮತ್ತು ಎರಡು ಎತ್ತು ಮತ್ತು ಒಂದು ಹಸು ರಾತ್ರಿ ಕಟ್ಟಿದ್ದವು ಬೆಳಗ್ಗೆ ಸಮಯದಲ್ಲಿ ಕಾಣದಂತೆ ಆಗಿದ್ದು , ಚಾಸಾ 1 ರವರು ಹಸುಗಳ ಹೆಜ್ಜೆ ಗುರುತನ್ನು ಹಿಡಿದುಕೊಂಡು ಹೋಗಿದ್ದು ಪಾರ್ವತಮ್ಮ ರವರ ತೋಟದಲ್ಲಿ ಅದರ ತಲೆ ಮತ್ತು ಚರ್ಮ ಹಾಗೂ ಇತರೆ ಮಾಂಸಕಂಡಗಳು ಕಂಡು ಬಂದಿರುತ್ತದೆ. ಇದರ ವಿಚಾರವಾಗಿ ಚಾಸಾ 1 ರವರು ಠಾಣೆಗೆ ಮಾಹಿತಿ ನೀಡಿದ್ದು , ಅದರಂತೆ ಮಹಜರ ಮಾಡಲು ನನ್ನನ್ನು ಹಾಗು ಚಾಸಾ 13 ರವರುನ್ನು ಕರೆಸಿದ್ದು ಠಾಣೆಯಲ್ಲಿ

ನೋಟಿಸನ್ನು ನೀಡಿ 5 ನೆ ಆರೋಪಿಯ ಜೊತೆಗೆ ಹೊಸಕೋಟೆಯ ಕಲ್ಲು ಕೋರಿಕೆಯ ಬಳಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ.

ಸದರಿ ಜಾಗವನ್ನು 5 ನೆ ಆರೋಪಿ ತೋರಿಸಿಕೊಟ್ಟಿರುತ್ತಾರೆ. ಮನೆಯ ಒಳಗಡೆ ಹೋಗಿ ಮಾಂಸ ಮಾರಾಟದಿಂದ ರೂ 500 ಮುಖ ಬೆಲೆಯ 6 ನೋಟು ಒಟ್ಟು ರೂ 3000/- ಹಣವನ್ನು ಪೋಲಿಸರು ಅಮಾನತ್ತು ಪಡಿಸಿಕೊಳ್ಳುತ್ತಾರೆ. ನಂತರ 5 ಕೆ ಜೆ ತೂಕದ ತಕ್ಕಡಿಯನ್ನು ಒಂದು ಸ್ಟೀಲ್ ತಟ್ಟೆ ಒಂದು ಕೆ ಜೆ ತೂಕದ ಕಲ್ಲು , ಎರಡು ಕೆ ಜೆಯ ತೂಕದ ಕಲ್ಲು ಪೋಲಿಸರಿಗೆ ನೀಡಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ. ನಂತರ ಸದರಿ ವಿಚಾರವನ್ನು ಪೋಲಿಸರು ಬರೆದುಕೊಂಡು ಬಂದು ಪೋಲಿಸ್ ಠಾಣೆಯಲ್ಲಿ ನಮಗೆ ಓದಿ ತಿಳಿಸುತ್ತಾರೆ.

ಸಾಕ್ಷಿಗೆ ಪಂಚನಾಮೆ ತೋರಿಸಲಾಗಿ ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ತಕ್ಕಡಿ , ಒಂದು ,ಸ್ಟೀಲ್ ತಟ್ಟೆ ಹಾಗೂ ಒಂದು ಕೆ ಜೆಯ ತೂಕದ ಕಲ್ಲನ್ನು ಹಾಗೂ ಎರಡು ಕೆಜೆಯ ತೂಕದ ಕಲ್ಲನ್ನು ನೋಡಿ ಗುರುತಿಸಿದರು.

**ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಅಬಿಯೋಜಕರು ಸಮಯವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ.